# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಸೆಪ್ಟೆಂಬರ್ 17, 2020

ಸಂಪುಟ : 47 ಸಂಚಿಕೆ : 128 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com


## ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಲು ಸರ್ಕಾರಕ್ಕೆ ಪ್ರಸ್ತಾವನೆ




ದಾವಣಗೆರೆ, ಸೆ.16 - ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದ್ದು, ಸುಮಾರು 5.53 ಲಕ್ಷ ಟನ್ ಮೆಕ್ಕೆಜೋಳ ಉತ್ಪಾದನೆಯಾಗುವ ನಿರೀಕ್ಷೆಯಿದ್ದು, ರೈತರ ಹಿತದೃಷ್ಟಿ ಹಾಗೂ ಮೆಕ್ಕೆಜೋಳ ಖರೀದಿ ಕೇಂದ್ರಕ್ಕೆ ಒತ್ತಡಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸೋಣ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಇಂದು ನಡೆದ ಆಹಾರ ಸರಬರಾಜು ಇಲಾಖೆ, ಎ.ಪಿ.ಎಂ.ಸಿ, ಕೃಷಿ ಇಲಾಖೆ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ವರ್ಷ 1.31 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆಯಾಗಿದ್ದು, ಅದಕ್ಕೆ ತಕ್ಕಂತೆ ಮಳೆ ಬಿದ್ದಿದ್ದು ಮೆಕ್ಕೆಜೋಳ ಎಲ್ಲಾ ತಾಲ್ಲೂಕುಗಳಲ್ಲಿ ಬಹಳ ಚೆನ್ನಾಗಿದೆ. ಹೋದ ಕಡೆಯಲ್ಲಾ ರೈತರು, ರೈತ ಮುಖಂಡರು ಹಾಗೂ ರೈತ ಸಂಘದವರು ಮನವಿಗಳನ್ನು ನೀಡುತ್ತಿದ್ದು, ಖರೀದಿ ಕೇಂದ್ರಕ್ಕೆ ಆಗ್ರಹಿಸುತ್ತಿದ್ದಾರೆ. ನಾನೂ ಕೂಡ ಮೊನ್ನೆ ನಡೆದ ಮುಖ್ಯಮಂತ್ರಿಗಳ ವಿಡಿಯೋ ಕಾನ್ಫರೆನ್ಸ್ ಕಾರ್ಯಕ್ರಮದಲ್ಲಿ ಜಿಲ್ಲೆಯ ರೈತರ ಹಿತದೃಷ್ಟಿಯಿಂದ ಮೆಕ್ಕೆಜೋಳ ಖರೀದಿ ಕೇಂದ್ರಕ್ಕಾಗಿ ಮನವಿ ಮಾಡಿದ್ದೇನೆ (2ನೇ ಪುಟಕ್ಕೆ)

# ಕೃಷಿ ಚಟುವಟಿಕೆಗಳಿಗೆ ಆರ್ಥಿಕ ಸ್ಪಂದನೆ

## 39 ಸಾವಿರ ಕೋಟಿ ರೂ. ಸಾಲ ಸೌಲಭ್ಯಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಚಾಲನೆ



ಬೆಂಗಳೂರು, ಸೆ. 16 - ಕೊರೊನಾ ಹಿನ್ನೆಲೆಯಲ್ಲಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಉತ್ತೇಜನ ನೀಡಲು 39,300 ಕೋಟಿ ರೂ. ಸಾಲ ಸೌಲಭ್ಯ ನೀಡುವ ಆರ್ಥಿಕ ಸ್ಪಂದನಾ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಚಾಲನೆ ನೀಡಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಕೃಷಿ ವಲಯಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರದ ನೆರವಿನೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಕೋವಿಡ್-19 ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಇಡೀ ದೇಶದಲ್ಲಿ ಮೊದಲು ಮುಂದಾದ ರಾಜ್ಯ ಕರ್ನಾಟಕ. ಲಾಕ್‌ಡೌನ್ ಪರಿಣಾಮವಾಗಿ ಎಲ್ಲಾ ವರ್ಗದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಇಂತಹ ಸನ್ನಿವೇಶದಲ್ಲಿ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸಲು 2,272 ಕೋಟಿ ರೂ. ಪ್ಯಾಕೇಜನ್ನು ಮೂರು ಹಂತಗಳಲ್ಲಿ ಅನುಷ್ಠಾನಗೊಳಿಸಲಾಗಿದೆ ಎಂದರು.

ರೈತ ಉತ್ಪಾದಕ ಸಂಸ್ಥೆ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಬಲಿಷ್ಠಗೊಳಿಸಲು 4,525 ಕೋಟಿ ರೂ. ಮೊತ್ತವನ್ನು ಕೇಂದ್ರ ರಾಜ್ಯಕ್ಕೆ ಹಂಚಿಕೆ ಮಾಡಿದೆ ಎಂದರು.

ಈ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಗೋದಾಮುಗಳ ನಿರ್ಮಾಣ, ಕೊಯ್ಲು ನಂತರದ ಸಂಸ್ಕರಣೆ, ಕೃಷಿ ಉತ್ಪನ್ನಗಳ ಸಾಗಾಣಿಕೆ ವ್ಯವಸ್ಥೆ, ಕೃಷಿ ಪತ್ತಿನ ಸಹಕಾರ ಸಂಘಗಳು 'ಬಹು ಉಪಯೋಗಿ ಸೇವಾ ಕೇಂದ್ರಗಳಾಗಿ' ಪರಿವರ್ತನೆಗೊಳ್ಳಲಿವೆ.


ಈ ಯೋಜನೆಯಡಿ 1,549 ಸಹಕಾರ ಸಂಘಗಳು ಲಾಭ ಪಡೆಯಲಿದ್ದು, ಇದುವರೆಗೆ 215 ಪ್ಯಾಕ್ಸ್‌ಗಳನ್ನು ಸೇರ್ಪಡೆ ಮಾಡಲಾಗಿದೆ.

ಕೊರೊನಾ ಸಂಕಷ್ಟದ ಸಂದರ್ಭದಲ್ಲಿ, ರೈತರಿಗೆ ಕೃಷಿ ಸಾಲ ಒದಗಿಸಲು ಕೇಂದ್ರ ಸರ್ಕಾರವು ಸ್ಪೆಷಲ್ ಲಿಕ್ವಿಡಿಟಿ ಫೆಸಿಲಿಟಿ ಅಡಿಯಲ್ಲಿ ರೂ. 1,700 ಕೋಟಿಗಳನ್ನು ನಬಾರ್ಡ್ ಮೂಲಕ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ನೀಡಿದೆ.

ಬೆಳೆ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆಯಡಿ 2020-21ನೇ ಸಾಲಿನಲ್ಲಿ ಇಲ್ಲಿಯವರೆಗೆ 11.88 ಲಕ್ಷ ರೈತರಿಗೆ 7,777.41 ಕೋಟಿ ರೂ.ಗಳ ಸಾಲ ವಿತರಿಸಿದ್ದು, ಬಡ್ಡಿ ಸಹಾಯಧನಕ್ಕಾಗಿ 992.50 ಕೋಟಿ ರೂ. ಗಳ ಆಯವ್ಯಯ ಅವಕಾಶ ಕಲ್ಪಿಸಲಾಗಿದ್ದು, ಈಗಾಗಲೇ ಸರ್ಕಾರದಿಂದ 496.24 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ.

ಸಾಲ ಮನ್ನಾ ಯೋಜನೆ-2018 ಯೋಜನೆಯಡಿಯಲ್ಲಿ ರಾಜ್ಯದ 16.41 ಲಕ್ಷ ರೈತರಿಗೆ 7,637.32 ಕೋಟಿ ರೂ.ಗಳು (2ನೇ ಪುಟಕ್ಕೆ)

## ಕೊರೊನಾ : ಜನಗಣತಿ ಮುಂದೂಡಿಕೆ



ನವದೆಹಲಿ, ಸೆ. 16 – ಕೊರೊನಾದಿಂದಾಗಿ ಜನಗಣತಿಯ ಮೊದಲ ಹಂತವನ್ನು ಮುಂದೂಡಲಾಗಿದೆ ಎಂದು ಕೇಂದ್ರ ಸರ್ಕಾರ ಸಂಸತ್ತಿಗೆ ಮಾಹಿತಿ ನೀಡಿದೆ. ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರ ನಡುವೆ ಮೊದಲ ಹಂತದ ಜನಗಣತಿ ಪ್ರಕ್ರಿಯೆ ನಡೆಯಬೇಕಿತ್ತು. ರಾಜ್ಯಸಭೆಗೆ ಲಿಖಿತ ಉತ್ತರ ನೀಡಿರುವ ಗೃಹ ಖಾತೆ ಅಧೀನ ಸಚಿವ ನಿತ್ಯಾನಂದ ರಾಯ್, ಮನೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಜನಗಣತಿಯನ್ನು ಕೊರೊನಾ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ ಎಂದಿದ್ದಾರೆ.

ಜನಗಣತಿ ಮೂಲಕ ಸಂಗ್ರಹಿಸಲಾಗುವ ಮಾಹಿತಿಯ ರಕ್ಷಣೆಗಾಗಿ ಹಲವು ಸುತ್ತಿನ ಭದ್ರತೆ ಕಲ್ಪಿಸಲಾಗಿದೆ ಎಂದೂ ಅವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

# ಪಾಲಿಕೆಯಲ್ಲಿನ ಕೆಲಸಕ್ಕೆ ಬ್ರೋಕರ್ ವಾಸಿ !

## ಬ್ರೋಕರ್ ಮೂಲಕ 15 ದಿನಗಳಲ್ಲಿ ಆಗುವ ಕೆಲಸ ನನ್ನಿಂದಾಗಿ 6 ತಿಂಗಳಾದರೂ ಆಗಿಲ್ಲ : ಚಮನ್ ಸಾಬ್



ದಾವಣಗೆರೆ, ಸೆ. 16 - ನನ್ನ ಮಗ ಖರೀದಿಸಿದ ಆಸ್ತಿಯ ಖಾತೆ ಬದಲಾವಣೆ ಕೆಲಸ ಬ್ರೋಕರ್‌ಗೆ ಕೊಟ್ಟಿದ್ದರೆ 15 ದಿನಗಳಲ್ಲಿ ಆಗುತ್ತಿತ್ತು. ಆದರೆ, ಲಂಚ ಕೊಡದೇ ನಾನೇ ನೇರವಾಗಿ ಕೆಲಸ ಮಾಡಿಸಿಕೊಳ್ಳಲು ಹೋಗಿದ್ದಕ್ಕೆ ಆರು ತಿಂಗಳಾದರೂ ಕೆಲಸ ಆಗಿಲ್ಲ. ಪಾಲಿಕೆಯ ಕಂದಾಯ ಇಲಾಖೆಯಲ್ಲಿ ಲಂಚ 'ಮಾಮೂಲಿ' ಆಗಿದೆ ಎಂದು ಪಾಲಿಕೆ ಸದಸ್ಯ ಚಮನ್ ಸಾಬ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಸುದೀರ್ಘ ಕಾಲದ ವಿಳಂಬದ ನಂತರ ಬುಧವಾರ ನಡೆದ ನಗರ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಲಂಚಾವತಾರದ ಸಮಸ್ಯೆಗಳನ್ನು ಚಮನ್ ಸಾಬ್ ದೀರ್ಘವಾಗಿ ವಿವರಿಸಿದರು.

'ಛಲ ಬೇಕು ಶರಣಂಗೆ, ಪರಧನವನೊಲ್ಲೆನೆಂಬ' ಎಂಬ ಬಸವಣ್ಣನವರ ವಚನದೊಂದಿಗೆ ಮಾತು ಆರಂಭಿಸಿದ ಅವರು ಶರಣರ, ದಾರ್ಶನಿಕರ ಇಂತಹ ವಿಚಾರಗಳನ್ನು ಅಧಿಕಾರಿಗಳು ಪಾಲಿಸುತ್ತಿಲ್ಲ. ಲಂಚವನ್ನು ಮಾಮೂಲಿ ಎಂಬಂತೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

ಕಂದಾಯ ವಿಭಾಗದಲ್ಲಿ ಆಂತರಿಕ (3ನೇ ಪುಟಕ್ಕೆ)

### ನಮ್ಮ ಮನೆ ಮುಂದೇ ನೋಡಂಗಿಲ್ಲ ಎಂದ ಮೇಯರ್!



ನಗರದಲ್ಲಿ ಪೌರ ಕಾರ್ಮಿಕರ ಗ್ಯಾಂಗ್‌ವರ್ಕ್ ನಡೆಯದೇ ನಗರದಲ್ಲಿ ಸ್ವಚ್ಛತೆಯ ಕೊರತೆಯಾಗಿದೆ. ನನ್ನ ಮನೆ ಮುಂದೇ ನೋಡಂಗಿಲ್ಲ ಎಂಬ ಪರಿಸ್ಥಿತಿ ಇದೆ ಎಂದು ಮೇಯರ್ ಅಜಯ್ ಕುಮಾರ್ ಹೇಳಿದ್ದಾರೆ.

ಈ ಹಿಂದೆ ಶಿವನಳ್ಳಿ ರಮೇಶ್ (3ನೇ ಪುಟಕ್ಕೆ)

### ಪಾಲಿಕೆಯ ಮಳಿಗೆಗಳನ್ನು ಹರಾಜಿನಲ್ಲಿ ಪಡೆದು ಮಾರಾಟ

ದಾವಣಗೆರೆ, ಸೆ. 16 - ಪಾಲಿಕೆಯ ಮಳಿಗೆಗಳನ್ನು ಹರಾಜಿನಲ್ಲಿ ಪಡೆದವರು ಬಾಡಿಗೆ ಕೊಡುವುದು ಒತ್ತಟ್ಟಿಗಿರಲಿ, ಆ ಆಸ್ತಿ ತಮ್ಮದೆಂದು ಮಾರಿದ್ದಾರೆ!

340 ಮಳಿಗೆಗಳನ್ನು ಹನ್ನೆರಡು ವರ್ಷಗಳ ಗುತ್ತಿಗೆ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ (3ನೇ ಪುಟಕ್ಕೆ)

## ಭಾರತ ಸರ್ಕಾರದ ನೆಟ್‌ವರ್ಕ್ ಮೇಲೆ ಚೀನಿಯರ ದಾಳಿ

**ಐವರ ವಿರುದ್ಧ ಅಮೆರಿಕದಲ್ಲಿ ದೋಷಾರೋಪ**

ವಾಷಿಂಗ್ಟನ್, ಸೆ. 16 – ಭಾರತ ಸರ್ಕಾರದ ನೆಟ್‌ವರ್ಕ್ ಸೇರಿದಂತೆ ವಿಶ್ವದಾದ್ಯಂತ ನೂರಕ್ಕೂ ಹೆಚ್ಚು ಸಂಸ್ಥೆಗಳನ್ನು ಹ್ಯಾಕ್ ಮಾಡಿ ಅಮೂಲ್ಯವಾದ ಸಾಫ್ಟ್‌ವೇರ್ ಮಾಹಿತಿ ಹಾಗೂ ಉದ್ಯಮದ ವಿವರಗಳನ್ನು ಕದಿಯುತ್ತಿದ್ದ ಆರೋಪದ ಮೇಲೆ ಐವರು ಚೀನಿಯರ ವಿರುದ್ಧ ಅಮೆರಿಕದ ಕಾನೂನು ಇಲಾಖೆ ದೋಷಾರೋಪ ಮಾಡಿದೆ. ಐವರು ಚೀನಿಯರು ಕಂಪ್ಯೂಟರ್ ಹ್ಯಾಕಿಂಗ್ ಮಾಡುತ್ತಿದ್ದರು ಹಾಗೂ ಇಬ್ಬರು ಮಲೇಷಿಯನ್ನರು ಅವರಿಗೆ ನೆರವಾಗುತ್ತಿದ್ದರು ಎಂದು ಅಮೆರಿಕದ ಉಪ ಅಟಾರ್ನಿ ಜನರಲ್ ಜೆಫ್ರಿ ರೊಸೆನ್ ತಿಳಿಸಿದ್ದಾರೆ. (2ನೇ ಪುಟಕ್ಕೆ)

## ಸಹಕಾರಿ ಬ್ಯಾಂಕುಗಳಿಗೆ ಆರ್.ಬಿ.ಐ. ನಿಗಾ ಮಸೂದೆಗೆ ಲೋಕಸಭೆ ಅಸ್ತು

ನವದೆಹಲಿ, ಸೆ. 16 – ಸಹಕಾರಿ ಬ್ಯಾಂಕುಗಳನ್ನು ರಿಸರ್ವ್ ಬ್ಯಾಂಕ್ ಉಸ್ತುವಾರಿಗೆ ತರುವ ಮಸೂದೆಗೆ ಲೋಕಸಭೆ ಒಪ್ಪಿಗೆ ನೀಡಿದೆ. ಠೇವಣಿದಾರರ ಹಿತ ರಕ್ಷಣೆಗಾಗಿ ಈ ಕ್ರಮದ ಅಗತ್ಯವಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಜೂನ್ 26ರಂದು ಈ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಅದರ ಜಾಗದಲ್ಲಿ ಬ್ಯಾಂಕಿಂಗ್ ನಿಯಂತ್ರಣ (ತಿದ್ದುಪಡಿ) ಮಸೂದೆ, 2020 ಜಾರಿಗೆ ತರಲಾಗುತ್ತಿದೆ.


ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಠೇವಣಿದಾರರ ಹಿತರಕ್ಷಣೆಗಾಗಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸಹಕಾರಿ ಸೊಸೈಟಿಗಳ ರಿಜಿಸ್ಟ್ರಾರ್ ಅಧಿಕಾರವನ್ನು ದಮನಿಸುತ್ತಿಲ್ಲ ಎಂದಿದ್ದಾರೆ.

ದೇಶದಲ್ಲಿ 1,482 ನಗರ ಸಹಕಾರಿ ಬ್ಯಾಂಕುಗಳಿವೆ. ಇವುಗಳಲ್ಲಿ 58 ಹಲವು ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.





ಚಿರಸ್ಮರಣೆ



ದಿ|| ನಲ್ಲೂರು ನರಹರಿ ಸುಬ್ರಾಯ ರೇವಣಕರ್

ಜನನ : 19.07.1907 ಮರಣ : 16.10.1982

ನೀವು ನಮ್ಮನ್ನಗಲಿ ಇಂದಿಗೆ 38 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ನಲ್ಲೂರು ಬಿ.ಎನ್. ಸರ್ವೋತ್ತಮ್ ರಾವ್ ನರಹರಿ ರೇವಣಕರ್
ಮತ್ತು ಸಹೋದರರು, ಸಹೋದರಿಯರು, ಅಳಿಯಂದಿರು,
ಸೊಸೆಯಂದಿರು, ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು.
ಹಾಗೂ ನಲ್ಲೂರು ಕುಟುಂಬ ವರ್ಗದವರು



ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 16.09.2020ರಂದು ನಿಧನರಾದ
ಮಹಾನಗರ ಪಾಲಿಕೆ ಪ್ರಥಮ ದರ್ಜೆ ಸಹಾಯಕರೂ, ನಮ್ಮ ಸಂಘದ ಸಲಹೆಗಾರರೂ ಆದ


ಶ್ರೀ ಬಿ. ಎಸ್. ವೆಂಕಟೇಶ್

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀ ರಾಘವೇಂದ್ರರಾವ್
ಅಧ್ಯಕ್ಷರು

ಶ್ರೀಮತಿ ಚೇತನಕುಮಾರಿ ರುದ್ರಮುನಿ
ಉಪಾಧ್ಯಕ್ಷರು

ಮತ್ತು ಆಡಳಿತ ಮಂಡಳಿ, ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗ, ಪಿಗ್ಮಿ ಸಂಗ್ರಹಕಾರರು



ಗೌತಮ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ

ರೈತರ ಬೀದಿ, ದಾವಣಗೆರೆ.

**ಸೈಟು ಮಾರಾಟಕ್ಕೆ**
30x50 ಉತ್ತರ, ತರಳಬಾಳು ಬಡಾವಣೆ
38x40 ಉತ್ತರ, ಆಂಜನೇಯ ಬಡಾವಣೆ
30x40 ದಕ್ಷಿಣ, ವಿನಾಯಕ ದೇವಸ್ಥಾನ (ವಿದ್ಯಾನಗರ)
30x40 ಉತ್ತರ, ವಿನಾಯಕ ದೇವಸ್ಥಾನದ ಎದುರು
60x40 ಉತ್ತರ, ವಿನಾಯಕ ದೇವಸ್ಥಾನದ ಎದುರು
40x50 ಪಶ್ಚಿಮ, ಸಿದ್ದವೀರಪ್ಪ ಬಡಾವಣೆ
40x60, 44x60, 22x60 MCC 'B' Block
40x60 ಉತ್ತರ ನಿಜಲಿಂಗಪ್ಪ ಬಡಾವಣೆ.
ಬೂಸ್ನೂರ್ ಕಿರಣ್ (ಏಜೆಂಟ್)
98440 63409, 97315 63409

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಸೈಟುಗಳು ಮಾರಾಟಕ್ಕಿವೆ**
1) 30x40 North ಶಿವಕುಮಾರಸ್ವಾಮಿ ಬಡಾವಣೆ. 2) 30x45 - North ಬಾಟ್ಲಿ ಬಿಲ್ಡಿಂಗ್ ಹತ್ತಿರ, ಮೇನ್ ರೋಡಿಗೆ ಹತ್ತಿರ. 3) 30x45 - North, ನವೋದಯ ಸ್ಕೂಲ್ ಹತ್ತಿರ. 4) 30x44-South, ಆಂಜನೇಯ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ
99166-12110, 93410-14130

**ಹೊಸ, ಹೊಸ ಮನೆಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್‌ನಲ್ಲಿ ಮತ್ತು ಆಂಜನೇಯ ಬಡಾವಣೆಯಲ್ಲಿ 30x40 Corner, 30x40 East, Ground Floor 2 Bed Room, Ist Floor 2 Bed Room ಮನೆ ಇದೆ.
ಐನಳ್ಳಿ ಚನ್ನಬಸಪ್ಪ (ಏಜೆಂಟ್)
99166 12110, 93410 14130

**ಖಾಲಿ ನಿವೇಶನ ಮಾರಾಟಕ್ಕಿದೆ**
30x40 ಉತ್ತರ ಮುಖ ನಿವೇಶನ ಶಂಕರ ವಿಹಾರ ಬಡಾವಣೆ (ಪಿಸಾಳೆ ಗಿರಿಯಪ್ಪ ಲೇಔಟ್ ಹತ್ತಿರ) ಟೆಲಿಫೋನ್ ಆಫೀಸ್ ಹತ್ತಿರ, ಪಿ.ಬಿ.ರಸ್ತೆ, ದಾವಣಗೆರೆ.
91415-41483, 99017-18675
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

**ಬಾಡಿಗೆಗೆ**
ಆಫೀಸ್ / ಕೋಚಿಂಗ್ ಗೆ ರೂಂ ಬಾಡಿಗೆಗೆ ಇದೆ. # 273/10A1, 273/6A1, 4 ಮತ್ತು 3ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆ, ಮೊದಲ ಮಹಡಿ ಪಿ.ಜೆ. ಬಡಾವಣೆ, ದಾವಣಗೆರೆ-577002.
ಸಂಪರ್ಕ : 94485-64387
94802-96533

**Required**
To Vacancy Here For Teacher. we want Science Teacher Qualifiction B.Sc, B.Ed (PCM)
Contact: Sir Mirza Convent
Sir Mirza Ismail Nagar, Near HKGN Shadi Mahal Davanagere.
93802 11833

**ತಕ್ಷಣ ಬೇಕಾಗಿದ್ದಾರೆ**
Samson Distillery ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆಯ ಸುತ್ತಮುತ್ತಲಿನಲ್ಲಿ 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಲೇಡಿ ಸೆಕ್ಯೂರಿಟಿಗಳು ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ. ತಕ್ಷಣ ಸಂಪರ್ಕಿಸಿ :
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
98455 24897, 90605 45500, 70199 48769

**ಕೆಲಸಕ್ಕೆ ಬೇಕಾಗಿದ್ದಾರೆ**
S.R. Construction ಗೆ Accountant ಬೇಕಾಗಿದ್ದಾರೆ.
ವಿಳಾಸ: ಎಸ್.ಎ ರವೀಂದ್ರನಾಥ ನಗರ
ಮೊ: 90352 20050

**ಉದ್ಯೋಗಕ್ಕಾಗಿ ಶಿಕ್ಷಣ**
SSLC, PUC ಪಾಸ್/ಫೇಲ್ ಮುಂದೇನು?
ಡಿಪ್ಲೋಮಾ ಪೇಷೆಂಟ್ ಕೇರ್ ನರ್ಸಿಂಗ್ ತರಬೇತಿ ನಂತರದಲ್ಲಿ ತಕ್ಷಣ ಕೆಲಸ.
Direct Exam : NTC, SSLC, PUC
ಗಂಗೋತ್ರಿ ಕಮ್ಯುನಿಟಿ ಕಾಲೇಜ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
86602 35013


# ಹರಪನಹಳ್ಳಿ : ಕುಗ್ರಾಮದ ಬಡ ಯುವಕನಿಗೆ ಪಿಎಸ್‌ಐ ಹುದ್ದೆ



ಹರಪನಹಳ್ಳಿ, ಸೆ.16- ಸಾಧನೆಗೆ ಛಲವೊಂದಿದ್ದರೆ ಸಾಕು ಬಡತನ ಸೇರಿದಂತೆ ಯಾವುದೇ ಸಮಸ್ಯೆ ಅಡ್ಡಿಯಾಗುವುದಿಲ್ಲ ಎಂಬುದನ್ನು ಕೂಲಿ ನಾಲಿ ಮಾಡಿ ಓದಿ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗೆ ಆಯ್ಕೆಯಾದ ಕೆ. ಮುರಳಿಧರನಾಯ್ಕ ಉದಾಹರಣೆಯಾಗಿದ್ದಾರೆ.

ಹರಪನಹಳ್ಳಿ ತಾಲ್ಲೂಕಿನ ಬಾಪೂಜಿ ನಗರ (ಉದಗಟ್ಟಿ ತಾಂಡ) ದ ಕೆ.ಗುಪ್ಯಾನಾಯ್ಕ ಹಾಗೂ ಚಿಂಚಲಿಬಾಯಿ ಬಡ ದಂಪತಿಯ ಕೊನೆಯ ಪುತ್ರ ಕೆ.ಮುರಳಿಧರನಾಯ್ಕ. 25 ವರ್ಷದ ಈ ಯುವಕ ತಮ್ಮ ತಾಂಡಾದಲ್ಲಿ 1 ರಿಂದ 5 ರವರೆಗೆ , 6 ರಿಂದ 10 ರವರೆಗೆ ಹಲುವಾಗಲು ಮೊರಾರ್ಜಿ ವಸತಿ ಶಾಲೆಯಲ್ಲಿ, ಪಿಯುಸಿಯನ್ನು ಹರಪನಹಳ್ಳಿ ಪಟ್ಟಣದ ಎಸ್‌ಎಸ್‌ಹೆಚ್ ಜೈನ್ ಕಾಲೇಜಿನಲ್ಲಿ ಹಾಗೂ ಬಿಇ ಸಿವಿಲ್ ಇಂಜಿನಿಯರಿಂಗ್ ಅನ್ನು ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ಮುಗಿಸಿದ್ದಾನೆ.

ಲೋಕೋಪಯೋಗಿ ಇಂಜಿನಿಯರ್ ಆಗಬೇಕೆಂಬ ಗುರಿ ಇದ್ದರೂ ಸಹೋದರ ಸಂತೋಷನಾಯ್ಕ ಪೊಲೀಸ್ ಪೇದೆಯಾಗಿದ್ದು, ಅವರಿಂದ ಸ್ಫೂರ್ತಿಗೊಂಡ ಮುರಳೀಧರ್ ಪ್ರಯತ್ನ ಬಿಡದೇ ಎರಡನೇ ಬಾರಿ ಬರೆದಾಗ ಇರುವ 300 ಹುದ್ದೆಗಳಿಗೆ 184ನೇ ಯವರಾಗಿ ಆಯ್ಕೆಯಾಗಿದ್ದಾರೆ.

# ನಗರ ಪಾಲಿಕೆಯ ವೆಂಕಟೇಶ್ ನಿಧನ



ದಾವಣಗೆರೆ,ಸೆ.16- ಮಹಾನಗರ ಪಾಲಿಕೆಯ ಪ್ರಥಮ ದರ್ಜೆ ಸಹಾಯಕ ಬಿ.ಎಸ್. ವೆಂಕಟೇಶ್ ಅವರು ಅನಾರೋಗ್ಯದಿಂದಾಗಿ ಇಂದು ಮಧ್ಯಾಹ್ನ ನಿಧನರಾದರು.

ಕೊರೊನಾ ವಾರಿಯರ್ ಆಗಿದ್ದ ವೆಂಕಟೇಶ್, 2-3 ದಿನಗಳಿಂದ ಬಾಪೂಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರ ಅಂತ್ಯಕ್ರಿಯೆಯು ಇಂದು ಸಂಜೆ ನಡೆಯಿತು.

**ಸಂತಾಪ :** ವೆಂಕಟೇಶ್ ಅವರ ನಿಧನಕ್ಕೆ ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

# ದ್ವಿಚಕ್ರ ಸವಾರಿಗೆ ಹೆಲ್ಮೆಟ್ ಕಡ್ಡಾಯ



ಬಳ್ಳಾರಿ ಎಸ್ಪಿ ಸೊದುಲು ಅಡಾವತ್

ಹರಪನಹಳ್ಳಿ, ಸೆ.16- ಬಳ್ಳಾರಿ ಜಿಲ್ಲೆಯಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲಿದ್ದು, ವರ್ಷದಲ್ಲಿ 400 ಸಾವುಗಳು ಅಪಘಾತದಿಂದ ಆಗಿವೆ ಎಂದು ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೊದುಲು ಅಡಾವತ್ ತಿಳಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬೈಕ್ ಸವಾರರು ಹೆಲ್ಮೆಟ್ ಧರಿಸುವುದಿಲ್ಲ. ಅದರಲ್ಲೂ ಯುವ ಜನತೆ ಹೆಲ್ಮೆಟ್ ಧರಿಸದೇ ಅಪಘಾತಕ್ಕೆ ಈಡಾಗುತ್ತಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಹೆಲ್ಮೆಟ್ ಕಡ್ಡಾಯಗೊಳಿಸಲಾಗುವುದು ಎಂದರು.

ಹರಪನಹಳ್ಳಿ ಹಾಗೂ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಗಳು ಶೀಘ್ರವೇ ಮೇಲ್ದರ್ಜೆಗೆ ಏರಲಿವೆ. ಪೊಲೀಸ್ ಸಿಬ್ಬಂದಿ ಹಾಗೂ ಅಧಿಕಾರಿಗಳ ಸಂಖ್ಯೆ ಹೆಚ್ಚಳವಾಗಲಿದ್ದು, ಕಾನೂನು ಸುವ್ಯವಸ್ಥೆ ಕಾಪಾಡಲು ಸಹಕಾರಿಯಾಗಲಿದೆ ಎಂದರು. ನೂತನ ಕಟ್ಟಡ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಹೋಗಿದ್ದು, ಶಿಥಿಲ ಗೊಂಡ ಪೊಲೀಸ್ ಕ್ವಾಟರ್ಸ್‌ಗಳ ಕುರಿತು ಗಮನ ಹರಿಸಲಾಗುವುದು ಎಂದರು.

ಆರಕ್ಷಕರು - ಜನರ ಮಧ್ಯೆ ಅಂತರ ಜಾಸ್ತಿಯಾಗುತ್ತಿದೆ ಎಂಬ ಆಕ್ರೋಶವಿದೆ. ಈ ಅಂತರ ಕಡಿಮೆ ಮಾಡಲು ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ಸಾಮಾಜಿಕ ಜಾಲ ತಾಣದಲ್ಲಿ ನೆಟ್‌ವರ್ಕ್ ಕಲ್ಪಿಸಿಕೊಂಡು ಜನಸ್ನೇಹಿಯಾಗಿ ಪೊಲೀಸರು ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳುತ್ತೇವೆ ಎಂದು ಅವರು ತಿಳಿಸಿದರು.

ಜಿಲ್ಲೆಯಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ಹಾಗೂ ಗಾಂಜಾ ಸೊಪ್ಪು ಬೆಳೆಯುವುದನ್ನು ಪತ್ತೆ ಹಚ್ಚಲಾಗುತ್ತಿದೆ. ಈಗಾಗಲೇ ಗಾಂಜಾಗೆ ಸಂಬಂಧ ಪಟ್ಟಂತೆ 7 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದೇವೆ ಎಂದು ಹೇಳಿದರು.

ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ, ಪಿಎಸ್‌ಐ ಸಿ. ಪ್ರಕಾಶ್, ಪೇದೆಗಳಾದ ಕೊಟ್ರೇಶ್, ಜಾತಪ್ಪ ಇನ್ನಿತರರಿದ್ದರು.

# ಆರ್ಥಿಕ ಸ್ಪಂದನೆ

**(1ನೇ ಪುಟದಿಂದ)** ಬಿಡುಗಡೆಯಾಗಿದ್ದು, ನಮ್ಮ ಸರ್ಕಾರದ ಅವಧಿಯಲ್ಲಿ 5,092.32 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಹೈನುಗಾರಿಕೆ ಮತ್ತು ಮೀನುಗಾರಿಕೆ ಉದ್ದೇಶಕ್ಕೆ 2 ಲಕ್ಷ ರೂ.ಗಳವರೆಗಿನ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯಡಿ ಈವರೆಗೆ 60.30 ಕೋಟಿ ರೂ. ಗಳ ಸಾಲ ವಿತರಿಸಲಾಗಿದೆ.

ಸಹಕಾರ ಕ್ಷೇತ್ರದಲ್ಲಿ 2.50 ಲಕ್ಷ ಸ್ತ್ರೀಶಕ್ತಿ / ಸ್ವಸಹಾಯ ಗುಂಪುಗಳನ್ನು ರಚನೆ ಮಾಡಲಾಗಿದ್ದು, ಇಲ್ಲಿಯವರೆಗೆ 71,657 ಗುಂಪುಗಳಿಗೆ 1,421.83 ಕೋಟಿ ರೂ. ಗಳ ಸಾಲ ವಿತರಿಸಲಾಗಿದೆ.

'ಬಡವರ ಬಂಧು' ಯೋಜನೆಯಡಿಯಲ್ಲಿ ನಗರ ಪ್ರದೇಶಗಳಲ್ಲಿನ ಬೀದಿಬದಿ ವ್ಯಾಪಾರಿಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ ಶೂನ್ಯ ಬಡ್ಡಿ ದರದಲ್ಲಿ ಕಿರು ಸಾಲವನ್ನು ಒದಗಿಸಲಾಗುತ್ತಿದ್ದು, ಒಟ್ಟು 20,760 ಫಲಾನುಭವಿಗಳಿಗೆ 14.43 ಕೋಟಿ ರೂ. ಗಳ ಸಾಲ ವಿತರಿಸಲಾಗಿದೆ.

ಇಂತಹ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ರಾಜ್ಯದ ಸಹಕಾರ ಸಂಸ್ಥೆಗಳು ಈ ವರ್ಷ ಸುಮಾರು 39,300 ಕೋಟಿ ರೂ. ಗಳ ಆರ್ಥಿಕ ಸ್ಪಂದನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ರಾಜ್ಯದ ಜನತೆಯ ಜೀವನವನ್ನು ಹಸನುಗೊಳಿಸುವ ಸಹಕಾರ ಕ್ಷೇತ್ರ ಉತ್ತರೋತ್ತರವಾಗಿ ಅಭಿವೃದ್ಧಿಯಾಗಲಿ ಎಂದರು.

# ರಾಣೇಬೆನ್ನೂರಿನಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ಸೆ.16- ಹಲಗೇರಿ ರಸ್ತೆ ಅಗಲೀಕರಣ ಪ್ರಯುಕ್ತ ರಾಣೇಬೆನ್ನೂರು ನಗರದ ಎಫ್-17 ಎಂ.ಜಿ ರೋಡ್ ಫೀಡರ್ ನ ಹಲಗೇರಿ ರಸ್ತೆಯಲ್ಲಿ ನಾಡಿದ್ದು ದಿನಾಂಕ 19 ರ ಶನಿವಾರ ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ಖರೀದಿ ಕೇಂದ್ರ ತೆರೆಯಲು ಪ್ರಸ್ತಾವನೆ



**(1ನೇ ಪುಟದಿಂದ)** ಹಾಗಾಗಿ ಪ್ರಸ್ತಾವನೆ ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸೋಣ. ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದರು.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಪಿ.ಡಿ.ಎಸ್. ನಲ್ಲಿ ಮೆಕ್ಕೆಜೋಳ ವಿತರಿಸಲು ಬರುವುದಿಲ್ಲ. ಹಾಗಾಗಿ ಸರ್ಕಾರ ಖರೀದಿಸುತ್ತಿಲ್ಲ. ಆದರೆ, ರೈತರು ಬೇಡಿಕೆಯಂತೆ ಜೋಳದ ಬೇರೆ ಬೇರೆ ಉತ್ಪನ್ನಗಳನ್ನು ತಯಾರಿಸಬಹುದೆಂಬ ಅಂಶವನ್ನು ಉಲ್ಲೇಖಿಸಿ ಪತ್ರ ಬರೆಯೋಣ ಎಂದರು.

ಆಹಾರ ಇಲಾಖೆಯ ಜಂಟಿ ನಿರ್ದೇಶಕ ಮಂಟೆಸ್ವಾಮಿ ಮಾಹಿತಿ ನೀಡಿ ಕೇಂದ್ರ ಸರ್ಕಾರ ಮೆಕ್ಕೆಜೋಳಕ್ಕೆ ರೂ.1850 ಬೆಂಬಲ ಬೆಲೆ ಘೋಷಿಸಿದೆ. ಆದರೆ ಮಾರ್ಕೆಟ್‌ನಲ್ಲಿ ಅದಕ್ಕಿಂತ ಕಡಿಮೆ ರೂ.1400 ಕ್ಕೆ ಮಾರಾಟ ಆಗುತ್ತಿದೆ. ಇನ್ನು ಹೊಸ ಬೆಳೆ ಬಂದರೆ ದರ ಮತ್ತಷ್ಟು ಕಡಿಮೆಯಾಗುವ ಸಂಭವವಿದ್ದು, ಸರ್ಕಾರ ಖರೀದಿ ಕೇಂದ್ರ ಆರಂಭಿಸಿದರೆ ಅನುಕೂಲವಾಗಲಿದೆ ಎಂದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್, ಕೃಷಿ ಇಲಾಖೆ ಉಪನಿರ್ದೇಶಕ ಶ್ರೀನಿವಾಸ ಚಿಂತಾಲ್ ಹಾಗೂ ಎಪಿಎಂಸಿ ಕಾರ್ಯದರ್ಶಿ ದೊರೆಸ್ವಾಮಿ ಇತರರಿದ್ದರು.

# ನೆಟ್‌ವರ್ಕ್ ಮೇಲೆ ಚೀನಿಯರ ದಾಳಿ

**(1ನೇ ಪುಟದಿಂದ)** ಮಲೇಷಿಯಾದ ನಾಗರಿಕರನ್ನು ಭಾನುವಾರ ಬಂಧಿಸಲಾಗಿದೆ. ಚೀನಾ ನಾಗರಿಕರು ತಲೆಮರೆಸಿಕೊಂಡಿದ್ದಾರೆ ಎಂದು ಘೋಷಿಸಿರುವುದಾಗಿ ಕಾನೂನು ಇಲಾಖೆಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಐವರು ನಾಗರಿಕರ ಅಕ್ರಮ ಕಂಪ್ಯೂಟರ್ ನುಸುಳುವಿಕೆ ಹಾಗೂ ಸೈಬರ್ ದಾಳಿಯನ್ನು ತಡೆಯಲು ಅಮೆರಿಕ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಆದರೆ, ಹೊರಗಡೆ ದಾಳಿ ಮಾಡುತ್ತಿರುವ ಹಾಗೂ ಬೌದ್ಧಿಕ ಆಸ್ತಿಯನ್ನು ಕದ್ದು ಚೀನಾಗೆ ನೆರವಾಗುತ್ತಿರುವ ಇವರಿಗೆ ಚೀನಾದ ಕಮ್ಯುನಿಸ್ಟ್ ಪಕ್ಷ ರಕ್ಷಣೆ ನೀಡುತ್ತಿದೆ ಎಂದು ಡೆಪ್ಯುಟಿ ಅಟಾರ್ನಿ ಜನರಲ್ ಹೇಳಿದ್ದಾರೆ.

2019ರಲ್ಲಿ ಅವರು ಭಾರತ ಸರ್ಕಾರದ ವೆಬ್ ತಾಣ, ವರ್ಚುಯಲ್ ಪ್ರೈವೇಟ್ ನೆಟ್‌ವರ್ಕ್ ಹಾಗೂ ಭಾರತ ಸರ್ಕಾರದ ಡಾಟಾ ಬೇಸ್ ಸರ್ವರ್‌ಗಳ ಮೇಲೆ ದಾಳಿ ನಡೆಸಿದ್ದರು ಎಂದು ಆರೋಪಿಸಲಾಗಿದೆ.

ದಾಳಿಕೋರರು ಕೊಬಾಲ್ಟ್ ಸ್ಟ್ರೈಕ್ ಮಾಲ್‌ವೇರ್ ಅನ್ನು ಭಾರತ ಸರ್ಕಾರದ ರಕ್ಷಿತ ಕಂಪ್ಯೂಟರ್‌ಗಳಲ್ಲಿ ಅಳವಡಿಸಿದ್ದರು. ಇದು ಅಮೆರಿಕ ಹಾಗೂ ವಿದೇಶದ ನೂರಕ್ಕೂ ಹೆಚ್ಚು ಕಂಪನಿಗಳ ಮೇಲೆ ಪ್ರಭಾವ ಬೀರಿದೆ ಎಂದು ಆರೋಪಿಸಲಾಗಿದೆ.

ಸಾಫ್ಟ್‌ವೇರ್ ಡೆವಲಪ್‌ಮೆಂಟ್, ಕಂಪ್ಯೂಟರ್ ಹಾರ್ಡ್‌ವೇರ್, ಸಾಮಾಜಿಕ ಮಾಧ್ಯಮ, ವಿಡಿಯೋ ಗೇಮ್ ಕಂಪನಿಗಳಿಂದ ಹಿಡಿದು ವಿಶ್ವವಿದ್ಯಾನಿಲಯಗಳು, ಪ್ರಜಾಪ್ರಭುತ್ವ ಪರ ರಾಜಕಾರಣಿಗಳು ಹಾಗೂ ಹಾಂಕಾಂಗ್‌ನಲ್ಲಿರುವ ಕಾರ್ಯಕರ್ತರೂ ಸೇರಿದಂತೆ ಎಲ್ಲರನ್ನೂ ಗುರಿಯಾಗಿಟ್ಟುಕೊಳ್ಳಲಾಗಿತ್ತು ಎಂದು ತಿಳಿಸಲಾಗಿದೆ.

ವಿಯಟ್ನಾಮ್ ಹಾಗೂ ಬ್ರಿಟನ್ ಸರ್ಕಾರಗಳ ಕಂಪ್ಯೂಟರ್ ಜಾಲಗಳ ಮೇಲೂ ದಾಳಿ ನಡೆಸಲಾಗಿತ್ತು. ಆದರೆ, ಬ್ರಿಟನ್‌ನಲ್ಲಿ ಅವರು ಯಶಸ್ವಿಯಾಗಲಿಲ್ಲ ಎಂದು ತಿಳಿಸಲಾಗಿದೆ.

ಈ ರೀತಿಯ ಸುಧಾರಿತ ದಾಳಿ ಅಭೂತಪೂರ್ವ ಎಂದು ಹೇಳಿರುವ ಅಮೆರಿಕದ ಕೊಲಂಬಿಯಾ ಜಿಲ್ಲೆಯ ಅಟಾರ್ನಿ ಜನರಲ್ ಮೈಖಲೆ ಆರ್. ಶೆರ್ವಿನ್, ಕೆಲ ಅಪರಾಧಿಗಳಿಗೆ ಚೀನಾ ಸರ್ಕಾರದ ಜನರು ಮುಕ್ತ ಅವಕಾಶ ನೀಡಿದ್ದರು ಎಂದು ತಿಳಿಸಿದ್ದಾರೆ.


**ಅಭಿಷೇಕ್ ಟಿಂಬರ್ ಅಂಡ್ ಸಾಮಿಲ್**
ಪಿ.ಬಿ. ರಸ್ತೆ, ದಾವಣಗೆರೆ.
ಮಾರ್ಕೆಟಿಂಗ್ ಮಾಡಲು ಬೈಕ್ ಹೊಂದಿರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
63644 46777

**ಮನೆ ಬಾಡಿಗೆಗೆ**
MCC A ಬ್ಲಾಕ್ ನ 3ನೇ ಮೇನ್ ರೋಡ್ ನಲ್ಲಿರುವ 3 ಬೆಡ್ ರೂಂನ ಮನೆ ಸಸ್ಯಹಾರಿಗಳಿಗೆ ಮಾತ್ರ ಬಾಡಿಗೆಗೆ ಇದೆ.
9743098298
( ಬ್ರೋಕರ್ ಗಳಿಗೆ ಅವಕಾಶವಿಲ್ಲ )

**ಮಾರಾಟಕ್ಕೆ**
ಡಿಸಿಎಂ ಟೌನ್ ಮನೆ- 30×35, SS ಲೇಔಟ್ ಮನೆ-30×40 (35 ಸಾವಿರ ಬಾಡಿಗೆ ಬರುವಂತಹ ಮನೆ), ರಾಜೇಂದ್ರ ಬಡಾವಣೆ ಮನೆ- 20×30, S.S. ಹಾಸ್ಪಿಟಲ್ ಹಿಂದಿನ ಸೈಟ್- 30×40, KHB ಸೈಟ್ - 30×40, ಬನಶ್ರೀ ಲೇಔಟ್ ಸೈಟ್(ಶ್ಯಾಮನೂರು)30×40, 30×42( ಸೈಟ್ ದರ ಹಳೆಯ ಆರ್ ಸಿ ಸಿ ಮನೆ ನಿಟುವಳ್ಳಿ ಹೊಸ ಬಡಾವಣೆ)
78996 36597, 99165 25828

**ಮನೆ ಲೀಜಿಗೆ ಇದೆ**
ಆಂಜನೇಯ ಬಡಾವಣೆ, 17ನೇ ಕ್ರಾಸ್, #1810/86, ಸಿಂಗಲ್ ಸಿದ್ದೇಶ್ವರ ಕಾಲೇಜ್ ರೋಡ್ ಬೆಡ್ ರೂಂ ಮನೆ ಲೀಜಿಗೆ ಇದೆ.
91642 33611

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
Salary : 9000/-
ನಂದಿ ಟೈರ್ ಪ್ಲಾನೆಟ್
Contact : 95381 87385
08192 261003
99161 43003

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6 BHK ಮನೆ 60x40 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ ಡ್ಯೂಪ್ಲೆಕ್ಸ್ ಮನೆ # 1935/7, 10ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: 99007 00091

**GRAMMAR AND SPOKEN ENGLISH**
Classes Started Join Immediately
100% RESULT
100% Job Guarantee
STUDTY IQ ACADEMY
DAVANGERE
8951717444, 9611730170

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಮನೆ ಕೆಲಸ ಹಾಗೂ ಅಡುಗೆ ಮಾಡಿಕೊಡಲು ಒಬ್ಬ ಮಹಿಳೆ ಬೇಕಾಗಿದ್ದಾರೆ.
ಫೋ. : 99725 09821

**ಬೇಕಾಗಿದ್ದಾರೆ**
ಬೆಳಿಗ್ಗೆ 10 ಗಂಟೆಯಿಂದ ಮನೆ ಕೆಲಸದ ಜೊತೆಗೆ ವಯಸ್ಸಾದವರನ್ನು ನೋಡಿಕೊಳ್ಳಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಸಂಪರ್ಕಿಸಿ :
63639-54459

**WANTED**
Tally oprater 2 years Experience Male/ Female, Delivery Boys, Male Marketing Excutive
Havish Benison Co
Karur Industrial Area, Davangere.
87222 78883

**ಜಗಳೂರಿನಲ್ಲಿ ಬಾಡಿಗೆಗೆ ಇದೆ**
ಜಗಳೂರಿನಲ್ಲಿ ಎಂ.ಜಿ. ಬಸ್‌ಸ್ಟ್ಯಾಂಡ್ ಪಕ್ಕ, ಅಮ್ಮ ಗಾರ್ಮೆಂಟ್ಸ್ ಕೆಳಗೆ ಸೆಲ್ಲರ್‌ನಲ್ಲಿ ಕಂಪ್ಯೂಟರ್ ಸೆಂಟರ್, ಬ್ಯಾಂಕಿಂಗ್, ಫೈನಾನ್ಸ್, ಬ್ಯಾಂಕಿಂಗ್ ಸರ್ವೀಸ್ ಸೆಂಟರ್, ಜ್ಯೂವೆಲರಿ ಶಾಪ್‌ಗೆ ಅರ್ಹವಾದ ಕೆಳ ಅಂತಸ್ತು ದೊರೆಯುತ್ತದೆ. ಸಂಪರ್ಕಿಸಿ :
99726 75773, 70196 76259

**ಟೈಪಿಸ್ಟ್ ಬೇಕಾಗಿದ್ದಾರೆ**
ಸಂಪರ್ಕಿಸಿ :
ಹರ್ಷ ಅಸೋಸಿಯೇಟ್ಸ್
3ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 79752-35107

**Contact On**
Advantage for 18 + Students Best Business Opportunity
Contact : 86603 42400, 98860 34163, 80734, 73552

**ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ನೇರ ಪರಿಹಾರ**
ಧರ್ಮಸ್ಥಳದ ಹಿರಿಯ ಬ್ರಾಹ್ಮಣ ಅರ್ಚಕರಿಂದ ಕೇವಲ 3 ದಿನದಲ್ಲಿ ಕೌಟುಂಬಿಕ ಕಲಹ, ಆರೋಗ್ಯ, ಸಂತಾನ, ವ್ಯಾಪಾರ, ರಾಜಕೀಯ, ಉದ್ಯೋಗ, ನಿಮ್ಮ ಯಾವುದೇ ತೊಂದರೆಗಳಿಗೂ ಚಿಂತೆ ಬೇಡ. ಇಂದೇ ಕರೆಮಾಡಿ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು.
ಪಂ: ಸುಬ್ರಮಣ್ಯ ಗುರೂಜಿ
97417 65669

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**House For Rent Long Term & Short Term Available**
with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 32427
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**V.S. PARAMEDICAL COLLEGE**
SSLC ಪಾಸ್/PUC- 'ಪಾಸ್ or ಫೇಲ್ ಆಗಿದ್ದೀರಾ ಚಿಂತಿಸಬೇಡಿ' Course (DIPLOMA HEALTH INSPECTOR (DHI) ಕೆಲವೇ ಸೀಟುಗಳು ಮಾತ್ರ
SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ.
9019580600, 8660195955

Excellent Coaching Center for
**IX & X (SSLC) CBSE & STATE SYLLABUS**
LONG TERM BATCHES
Mathematics, Science, Social Science & English Grammar.
Admission Started
Study IQ Academy, Davangere.
8951717444, 9611730170

**HOUSE FOR RENT**
2 BHK, Ground Floor, East Facing, S.S. Layout, "B" Block, , 4th main, 7th Cross, Davangere.
90084 18081

**ಪ್ರವೇಶ ಪ್ರಕಟಣೆ**
SSLC, PUC, ITI - Pass/Fail
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಮಾರಾಟಕ್ಕಿದೆ**
ಯರಗುಂಟೆ ವಾರ್ಡ್ ನಂ 45ರಲ್ಲಿ ಹೊಸದಾಗಿ ಕಟ್ಟಿಸಿರುವ 30x40 ಅಡಿ ಅಳತೆಯ 2 ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಪಶ್ಚಿಮ ದಿಕ್ಕಿನ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
9844958093, 9844779947

**ಹೆಚ್ಚಿನ ಆದಾಯ ಗಳಿಸಲು**
Earn Extra Income By working as part Time/ Full Time
Contact : 86603 42400, 98860 34163, 80734 73552

**ಜಮೀನು ಮಾರುವುದಿದೆ**
ಹರಪನಹಳ್ಳಿ ತಾಲ್ಲೂಕು ತೆಲಗಿ ಹೋಬಳಿ ನಿಟ್ಟೂರು ಗ್ರಾಮದಲ್ಲಿರುವ ಶ್ರೀ ಹಡಪದ ಗಂಗವ್ವ ಕೋಂ. ಶಿವಮೂರ್ತ್ಯಪ್ಪ ಇವರ ಮಾಲ್ಕಿ ಹಕ್ಕುವುಳ್ಳ ಸರ್ವೆನಂ 149/4ರ ಪೈಕಿ ವಿಸ್ತೀರ್ಣ 4 ಎಕರೆ 49 ಸೆಂಟ್ಸ್ ನೀರಾವರಿ ಜಮೀನು ಮಾರುವುದಿದೆ.
ಫೋ. : 99863 12044, 95456 83059

**ರಿಪೇರಿ/ಸರ್ವೀಸ್**
ಎಲ್ಲಾ ಕಂಪನಿಯ UPS/ Battery /ROಗಳನ್ನು ತಕ್ಷಣವೇ ರಿಪೇರಿ ಮಾಡಿಕೊಡಲಾಗುವುದು.
(ONLINE and OFFLINE)
ಪೀಸ್ ಎಂಟರ್‌ಪ್ರೈಸಸ್
9901318277, 8310042490

**House For Rent Long Term & Short Term Available**
with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451


**ಓದುಗರ ಗಮನಕ್ಕೆ** ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. - ಜಾಹೀರಾತು ವ್ಯವಸ್ಥಾಪಕರು

# ಶ್ರೀ ಬಿ.ಎಸ್. ವೆಂಕಟೇಶ್ ನಿಧನ



ದಾವಣಗೆರೆ ಮಹಾನಗರ ಪಾಲಿಕೆ ನೌಕರ ಮತ್ತು ಕೊರೊನಾ ವಾರಿಯರ್ ಆದ

**ಶ್ರೀ ಬಿ.ಎಸ್. ವೆಂಕಟೇಶ್**

ಪ್ರಥಮ ದರ್ಜೆ ಸಹಾಯಕರು, ಆರೋಗ್ಯ ಶಾಖೆ ಇವರು ದಿನಾಂಕ : 16.09.2020 ರಂದು ನಿಧನರಾಗಿರುತ್ತಾರೆ. ಮೃತರು ತಾಯಿ, ಪತ್ನಿ, ಇಬ್ಬರು ಮಕ್ಕಳು ಹಾಗೂ ಸಹೋದರರು ಮತ್ತು ಬಂಧು-ಬಳಗವನ್ನು ಅಗಲಿರುತ್ತಾರೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ : 16.09.2020ರಂದು ಸಂಜೆ 5 ಗಂಟೆಗೆ ಎಸ್.ಓ.ಜಿ. ಕಾಲೋನಿ, ರಾಮನಗರದಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತರು :
ತಾಯಿ, ಪತ್ನಿ, ಸಹೋದರರು, ಮಕ್ಕಳು, ಬಂಧು-ಬಳಗದವರು ಮತ್ತು ಮಹಾನಗರ ಪಾಲಿಕೆ ನೌಕರ ವರ್ಗದವರು. ಫೋ. : 8147838023

## ಗಂಗನರಸಿ ಮಲ್ಲೇಶಣ್ಣ ನಿಧನ



ದಾವಣಗೆರೆ ನಿವಾಸಿಯಾದ ಹರಿಹರ ತಾಲ್ಲೂಕಿನ **ಗಂಗನರಸಿಯ ಮಲ್ಲೇಶಣ್ಣ** ಅವರು ದಿನಾಂಕ 15.09.2020ರ ಮಂಗಳವಾರ ರಾತ್ರಿ 11.05ಕ್ಕೆ ನಿಧನರಾದರು. ಪತ್ನಿ, ಮೂವರು ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.09.2020ರ ಬುಧವಾರ ಬೆಳಗಿನ ಜಾವ ನೆರವೇರಿಸಲಾಯಿತು.

ದುಃಖತಪ್ತರು : ಕೆ.ಪಿ. ಬಸವರಾಜ್ ಎಲಿಗಾರ್
ಮರುಳಸಿದ್ದೇಶ್ವರ ಪಿ.ಜಿ., ಆಂಜನೇಯ ಬಡಾವಣೆ, ದಾವಣಗೆರೆ.

## ಜಾನಕಮ್ಮ ನಿಧನ



ದಾವಣಗೆರೆ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ನಿವೃತ್ತ ದ್ವಿತೀಯ ದರ್ಜೆ ಸಹಾಯಕರಾದ

**ಶ್ರೀಮತಿ ಜಾನಕಮ್ಮ**

ಅವರು ದಿನಾಂಕ 16.9.2020ರ ಬುಧವಾರ ಸಂಜೆ 7.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 62 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.9.2020ರ ಗುರುವಾರ ಬೆಳಿಗ್ಗೆ 11 ಕ್ಕೆ ಕುಂದುವಾಡದಲ್ಲಿರುವ ನಮ್ಮ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಪತಿ : ವಿಜಯಕುಮಾರ್ ಹೆಚ್.ಬಿ. ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
# 852/5, ಸರಸ್ವತಿ ನಗರ, 'ಎ' ಬ್ಲಾಕ್, ದಾವಣಗೆರೆ.



**ಸುವರ್ಣಾವಕಾಶ**
ನಿಮ್ಮ ಪ್ಲಾಟ್‌ಗಳಿಗೆ ಮುಂಗಡ ಬುಕ್ಕಿಂಗ್ ಸೌಲಭ್ಯವಿದೆ. ಸುಲಭ ಕಂತುಗಳಲ್ಲಿ ಪಾವತಿ. ಸಂಪರ್ಕಿಸಿ : # 91/15, ಶ್ರೀ ಧರ್ಮಸ್ಥಳ ರಿಯಲ್ ಎಸ್ಟೇಟ್, ಕೆ.ಹೆಚ್.ಬಿ. ಕಾಲೋನಿ, ಕುಂದುವಾಡ, ದಾವಣಗೆರೆ.
94810 92715, 81529 66109

**ಮನೆ ಪಾಠ ಮಾಡಲು ಶಿಕ್ಷಕರು ಬೇಕಾಗಿದ್ದಾರೆ.**
ಸಿ.ಬಿ.ಎಸ್.ಇ. 4ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗೆ ಮನೆ ಪಾಠ ಮಾಡಲು ಅನುಭವವುಳ್ಳ ಶಿಕ್ಷಕರು ಬೇಕಾಗಿದ್ದಾರೆ.
ಸಂಪರ್ಕಿಸಿ:
94819 09848

**ನೇರ ಪರೀಕ್ಷೆಗಳು**
PUC, ARTS, COMMERCE, SCIENCE ಮತ್ತು SSLC
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಕೊನೆಯ ದಿನಾಂಕ 27.09.2020
ಮಾನಸ ಎಜುಕೇಷನ್ ಟ್ರಸ್ಟ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276



**CHANGE OF NAME**
**PAILWAN MOHAMED RIYAZ** (OLD NAME) S/O LATE MOHAMED HUSSIN RESIDENT OF # 203, CHAMARAJPET, DAVANGERE DIST. PINCODE - 577 001 KARNATAKA HAVE CHANGED MY NAME AS **RIYAZ PAILWAN** (NEW NAME) VIDE AFFIDAVIT DATED 07.09.2020 SWORN BEFORE NOTARY IP BRAHMKUMAR DAVANGERE. HENCEFORTH ALL MY TRANSACTION & DEALINGS WILL BE IN MY NEW NAME **RIYAZ PAILWAN**
Sd/- **RIYAZ PAILWAN**

## ಮೆಳ್ಳೇಕಟ್ಟೆ ನಾಗರಾಜ್ ನಿಧನ



ದಾವಣಗೆರೆ ತಾಲ್ಲೂಕು ಮೆಳ್ಳೇಕಟ್ಟೆ ಗ್ರಾಮದ ವಾಸಿ ಹೆಚ್.ಎಸ್. ನಾಗರಾಜ್ (49) ಅವರು ದಿನಾಂಕ 15.9.2020ರ ಮಂಗಳವಾರ ನಿಧನರಾದರು. ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಮೆಳ್ಳೇಕಟ್ಟೆಯಲ್ಲಿ ಅಂದೇ ನೆರವೇರಿಸಲಾಯಿತು.

## ಶ್ರೀಮತಿ ಗದ್ದಿಗೆಮ್ಮ ನಿಧನ



ದಾವಣಗೆರೆ ಎಸ್.ಪಿ.ಎಸ್ ನಗರ ವಾಸಿ, ದಿ. ಆಲೂರು ಅಂಗಡಿ ಬಸವರಾಜಪ್ಪನವರ ಧರ್ಮಪತ್ನಿ ಶ್ರೀಮತಿ ಗದ್ದಿಗೆಮ್ಮ (72) ಇವರು ದಿನಾಂಕ 16.09.2020ರ ಬುಧವಾರ ಬೆಳಿಗ್ಗೆ 10.45ಕ್ಕೆ ನಿಧನರಾದರು. ನಾಲ್ವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.09.2020ರ ಬುಧವಾರ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

## ಕಾಡಾ ಅಧ್ಯಕ್ಷರಾಗಿ ಪವಿತ್ರಾ ರಾಮಯ್ಯ



ಶಿವಮೊಗ್ಗ, ಸೆ. 16 - ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ಕಾಡಾ) ನೂತನ ಅಧ್ಯಕ್ಷರಾಗಿ ಪವಿತ್ರಾ ರಾಮಯ್ಯ ಅವರನ್ನು ನೇಮಿಸ ಲಾಗಿದೆ. ಶಿವಮೊಗ್ಗ ತಾಲ್ಲೂಕಿನ ಮುತ್ತಿನಕೊಪ್ಪದ ಪವಿತ್ರಾ ರಾಮಯ್ಯ ಅವರು ರೈತ ಹೋರಾಟಗಾರ್ತಿ.

ಪವಿತ್ರಾ ರಾಮಯ್ಯ ಅವರು ಎರಡು ಬಾರಿ ರಾಜ್ಯದ ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷರಾಗಿ ಪ್ರಹ್ಲಾದ್ ಜೋಷಿ ಹಾಗೂ ಬಿ.ಎಸ್.ಯಡಿಯೂರಪ್ಪ ಅವರ ಜೊತೆ ಕಾರ್ಯನಿರ್ವಹಣೆ ಮಾಡಿದ್ದಾರೆ.

## ಬಸವರಾಜ ಕೇಲಗಾರ ರಾಜ್ಯ ಬಿಜೆಪಿ ಸಂಚಾಲಕ



ರಾಣೇಬೆನ್ನೂರು, ಸೆ. 16- ಡಾ.ಬಸವರಾಜ ಕೇಲಗಾರ ಅವರನ್ನು ಭಾರತೀಯ ಜನತಾ ಪಕ್ಷದ ನೇಕಾರ ಪ್ರಕೋಷ್ಠದ ರಾಜ್ಯ ಸಂಚಾಲಕರಾಗಿ ನೇಮಕ ಮಾಡಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಆದೇಶ ಹೊರಡಿಸಿದ್ದಾರೆ.

# ವೈದ್ಯಕೀಯ ಅಧಿಕಾರಿಗಳ ಜೊತೆ ವಿಜಯೇಂದ್ರ ಸಭೆಯಿಂದ ರಾಜಕೀಯ ಚಕಮಕಿ



ಬೆಂಗಳೂರು, ಸೆ. 16 – ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರು ವೈದ್ಯಕೀಯ ಅಧಿಕಾರಿಗಳನ್ನು ಭೇಟಿ ಮಾಡಿದ್ದು ರಾಜಕೀಯ ಚಕಮಕಿಗೆ ಕಾರಣವಾಗಿದೆ. ಯಾವುದೇ ಸಂವಿಧಾನಿಕ ಹುದ್ದೆ ಹೊಂದಿರದ ವಿಜಯೇಂದ್ರ ಅವರು ವೈದ್ಯಕೀಯ ಅಧಿಕಾರಿಗಳನ್ನು ಭೇಟಿ ಮಾಡಿ ಸಭೆ ನಡೆಸಿರುವುದು ಆಡಳಿತ ಯಂತ್ರದಲ್ಲಿ ಮೂಗು ತೂರಿಸಿದಂತೆ. ಈ 'ದಲ್ಲಾಳಿತನ' ಪ್ರಜಾಪ್ರಭುತ್ವದ ಪವಿತ್ರತೆಗೆ ಧಕ್ಕೆ ತಂದಿದೆ ಎಂದು ಕಾಂಗ್ರೆಸ್ ಹೇಳಿದೆ.

ಇದಕ್ಕೆ ತಿರುಗೇಟು ನೀಡಿರುವ ಬಿಜೆಪಿ ಉಪಾಧ್ಯಕ್ಷರೂ ಆಗಿರುವ ವಿಜಯೇಂದ್ರ, ರಚನಾತ್ಮಕ ಸಲಹೆಗಳಿದ್ದಲ್ಲಿ ಸರ್ಕಾರಕ್ಕೆ ನೀಡಲಿ, ಅದುವೇ ರಾಜಕೀಯ ಪಕ್ಷದ ನಿಜವಾದ ಪ್ರಜಾತಾಂತ್ರಿಕ ನಡೆಯಾಗಿದೆ ಎಂದಿದ್ದಾರೆ.

ಸಭೆಯ ಬಗ್ಗೆ ಟ್ವೀಟ್ ಮಾಡಿರುವ ಕಾಂಗ್ರೆಸ್, ವಿಜಯೇಂದ್ರ ಮುಖ್ಯಮಂತ್ರಿ ಅಲ್ಲ, ಮಂತ್ರಿಯಲ್ಲ, ಸಂಸದರಲ್ಲ, ಶಾಸಕರಲ್ಲ, ಗ್ರಾಮ ಪಂಚಾಯ್ತಿ ಸದಸ್ಯ ಕೂಡ ಅಲ್ಲ. ಯಾವುದೇ ಸಾಂವಿಧಾನಿಕ ಹುದ್ದೆ ಹೊಂದಿರದ ತಾವು ಸರ್ಕಾರಿ ವೈದ್ಯಾಧಿಕಾರಿಗಳ ಸಭೆ ನಡೆಸಿದ್ದೇಕೆ ? ಎಂದು ಪ್ರಶ್ನಿಸಿದೆ. ವಿಜಯೇಂದ್ರ ಅವರು ಅಧಿಕಾರಿಗಳ ಜೊತೆ ಗಿರುವ ಫೋಟೋ ಸಹ ಕಾಂಗ್ರೆಸ್ ಟ್ವೀಟ್ ಮಾಡಿದೆ.

ಇದಕ್ಕೆ ಉತ್ತರಿಸಿರುವ ವಿಜಯೇಂದ್ರ, ಯುಪಿಎ ಸರ್ಕಾರದ ಆಡಳಿತಾವಧಿಯಲ್ಲಿ ಈ ಪ್ರಜಾಪ್ರಭುತ್ವ ದೇಶದ ಅತ್ಯುನ್ನತ ಸ್ಥಾನವನ್ನಲಂಕರಿಸಿದ ಪ್ರಧಾನಮಂತ್ರಿಗಳನ್ನೇ ತಮ್ಮ ಮನೆಗೆ ಬುಲಾವ್ ಮಾಡಿಕೊಳ್ಳುತ್ತಿದ್ದ ಗುಲಾಮಿ ಪದ್ಧತಿಯ ಸಂಸ್ಕೃತಿ ನಮ್ಮದಲ್ಲ. ನಾನು ಯಡಿಯೂರಪ್ಪನವರ ಕುಟುಂಬ ಸದಸ್ಯ ಎನ್ನುವುದಕ್ಕಿಂತ ರಾಜ್ಯ ಬಿಜೆಪಿಯ ಜವಾಬ್ದಾರಿಯುತ ಉಪಾಧ್ಯಕ್ಷನಾಗಿದ್ದೇನೆ. ನನ್ನ ಬಳಿ ಗೌರವ, ವಿಶ್ವಾಸವಿರಿಸಿ ಯಾರೇ ಬಂದರೂ ಅದಕ್ಕೆ ಸ್ಪಂದಿಸುವುದು ನನ್ನ ಕರ್ತವ್ಯ ಎಂದು ಹೇಳಿದ್ದಾರೆ. ವಿಜಯೇಂದ್ರ ಆಡಳಿತದಲ್ಲಿ ಮಧ್ಯ ಪ್ರವೇಶ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಹೇಳುತ್ತಾ ಬಂದಿದೆ. ಈ ಆರೋಪವನ್ನು ಯಡಿಯೂರಪ್ಪ ತಳ್ಳಿ ಹಾಕಿದ್ದಾರೆ.

ವಿಜಯೇಂದ್ರ ಅವರನ್ನು ಸಮರ್ಥಿಸಿಕೊಂಡಿರುವ ಆರೋಗ್ಯ ಸಚಿವ ಶ್ರೀರಾಮುಲು, ವೈದ್ಯಕೀಯ ಅಧಿಕಾರಿಗಳು ವಿಜಯೇಂದ್ರ ಅವರನ್ನು ಭೇಟಿ ಮಾಡಿದ್ದರಲ್ಲಿ ತಪ್ಪೇನೂ ಇಲ್ಲ. ಅವರು ಪಕ್ಷದಲ್ಲಿ ಜವಾಬ್ದಾರಿಯುತ ಹುದ್ದೆ ಹೊಂದಿದ್ದಾರೆ. ವೈದ್ಯರು ತಮ್ಮ ಸಮಸ್ಯೆಗಳನ್ನು ಅವರ ಮೂಲಕ ಮುಖ್ಯಮಂತ್ರಿ ಗಮನಕ್ಕೆ ತಂದಿದ್ದಾರೆ ಎಂದು ತಿಳಿಸಿದ್ದಾರೆ.

## ಗೃಹ ಸಚಿವ ಬೊಮ್ಮಾಯಿಗೆ ಕೊರೊನಾ

ಬೆಂಗಳೂರು, ಸೆ. 16 - ಚಳಿಗಾಲದ ವಿಧಾನಮಂಡಲದ ಅಧಿವೇಶನ ಆರಂಭಗೊಳ್ಳುವ ಹಂತದಲ್ಲೇ ಸಚಿವರು ಮತ್ತು ಶಾಸಕರುಗಳಿಗೆ ಕೊರೋನಾ ಸೋಂಕು ತಗುಲಿದೆ.

ಈಗಾಗಲೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸಂಪುಟದ ಹತ್ತಕ್ಕೂ ಹೆಚ್ಚು ಸಚಿವರುಗಳಿಗೆ ಕೊರೊನಾ ಸೋಂಕು ತಗುಲಿ, ಅವರು ಗುಣಮುಖರಾಗಿದ್ದಾರೆ.

ಇದೀಗ ಗೃಹ ಸಚಿವ ಬಸವರಾಜ್ ಬೊಮ್ಮಾಯಿ ಅವರಿಗೂ ಸೋಂಕು ದೃಢಪಟ್ಟಿದ್ದು, ಈ ಬಗ್ಗೆ ಅವರೇ ಟ್ವಿಟ್ಟರ್‌ನಲ್ಲಿ ಮಾಹಿತಿ ನೀಡಿದ್ದಾರೆ.

ತಮಗೆ ಸೋಂಕು ತಗಲಿದೆಯಾದರೂ, ರೋಗದ ಲಕ್ಷಣಗಳು ಕಾಣಿಸಿಕೊಂಡಿಲ್ಲ, ಆರೋಗ್ಯವಾಗಿದ್ದೇನೆ. ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿದ್ದೇನೆ ಎಂದು ಟ್ವೀಟ್ ಮಾಡಿದ್ದಾರೆ.

ನಿನ್ನೆಯಷ್ಟೇ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ. ಗೋಪಾಲಯ್ಯಗೆ ಸೋಂಕು ದೃಢಪಟ್ಟು, ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಿಧಾನಸಭೆಯಲ್ಲಿ ಭಾಗವಹಿಸುವ ಎಲ್ಲಾ ಸಚಿವರು, ಶಾಸಕರು ಮತ್ತು ಅಧಿಕಾರಿಗಳು ಕೊರೊನಾ ಪರೀಕ್ಷೆಗೆ ಒಳಗಾಗಿ ಅದರ ದಾಖಲೆಯನ್ನು ಸಭಾಧ್ಯಕ್ಷರ ಕಚೇರಿಗೆ ತಲುಪಿಸಬೇಕು. ಸಚಿವರು, ಶಾಸಕರು ಮತ್ತು ಅಧಿಕಾರಿಗಳಿಗೆ ಇದೇ 18 ರಂದು ಕೊರೊನಾ ಪರೀಕ್ಷೆಯನ್ನು ವಿಧಾನಸಭಾ ಸಚಿವಾಲಯ ಹಮ್ಮಿಕೊಂಡಿದೆ.







## ಜೆಇಇ ಪರೀಕ್ಷೆ : ಭದ್ರಾ ಪದವಿ ಪೂರ್ವ ಕಾಲೇಜಿನ ಸಾಧನೆ



ದಾವಣಗೆರೆ, ಸೆ.16- ಜೆ ಇ ಇ (ಮೇನ್ಸ್) 2020 ರ ಪರೀಕ್ಷೆಯಲ್ಲಿ ಭದ್ರಾ ಪದವಿ ಪೂರ್ವ ಕಾಲೇಜಿನ ಗಿರೀಶ್ ಹರೀಶ್ ನಾಯಕ್ ಇವರು ಅಖಿಲ ಭಾರತ ಮಟ್ಟದ 29 (AIR) ನೇ ರ್‍ಯಾಂಕ್ ಪಡೆದು ಜಿಲ್ಲೆಗೆ ಪ್ರಥಮರಾಗಿದ್ದಾರೆ. ವಿದ್ಯಾರ್ಥಿಗಳಾದ ರುದ್ರೇಶ್ ಎಸ್ - 1192 (AIR) ನೇ ರ್‍ಯಾಂಕ್, ಅಕ್ಷತಾ ಎಸ್. ಆರ್- 9411 (AIR) ನೇ ರ್‍ಯಾಂಕ್, ಅಪ್ಪು ಕೆ.ಎಸ್ – 10128 (AIR) ನೇ ರ್‍ಯಾಂಕ್ ಹಾಗೂ ಮಂಜುನಾಥ್ ಆರ್ – 28468 (AIR) ನೇ ರ್‍ಯಾಂಕ್ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆ ಬಗ್ಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪ್ರೊ|| ಸಿ.ಹೆಚ್. ಮುರಿಗೇಂದ್ರಪ್ಪ, ಕಾರ್ಯದರ್ಶಿ ಎಂ. ಸಂಕೇತ್, ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಜೆಇಇಯಲ್ಲಿ ಸೈನ್ಸ್ ಅಕಾಡೆಮಿ ವಿದ್ಯಾರ್ಥಿಗಳ ಸಾಧನೆ



ದಾವಣಗೆರೆ, ಸೆ.16- ಜೆಇಇ ಪರೀಕ್ಷೆಯಲ್ಲಿ ಸೈನ್ಸ್ ಅಕಾಡೆಮಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶವನ್ನು ಪಡೆದಿದ್ದಾರೆ. ಆರ್. ಪ್ರವೀಣ್ ಕುಮಾರ್ 4820 ನೇ ರ್‍ಯಾಂಕ್, ವಿನಯ್ ಸ್ವಸ್ತಿಕ್ 7525, ಆರ್. ರಂಗಸ್ವಾಮಿ 18157, ಎಲ್. ತರುಣ್ 26,453 ಹಾಗೂ ನೇಹಾ ಮಂಜುನಾಥ್ ರಾಯ್ಕರ್ 27,098 ರ್‍ಯಾಂಕ್ ಗಳಿಸಿರುತ್ತಾರೆ.ಇದಲ್ಲದೇ ಜೆಇಇ ಮೊದಲ ಹಂತದ ಆರ್ಕಿಟೆಕ್ಟ್ ವಿಭಾಗದಲ್ಲಿ ಶ್ರೀಹರಿ 96.96 ಪರ್ಸಂಟೈಲ್ ಪಡೆದು ಉತ್ತಮ ಸಾಧನೆ ತೋರಿದ್ದಾರೆ ಎಂದು ಕಾಲೇಜು ಪ್ರಾಂಶುಪಾಲರು ತಿಳಿಸಿದ್ದಾರೆ.


ಚಿರಸ್ಮರಣೆ



ಶ್ರೀ ಮಡಿವಾಳರ ಗಾದಿಲಿಂಗಪ್ಪ
ನಿಧನ : 17.09.2008

ನೀವು ನಮ್ಮನ್ನಗಲಿ ಇಂದಿಗೆ 12 ವರ್ಷಗಳು ಕಳೆದರೂ ನೀವು ಪಟ್ಟ ಶ್ರಮ ಮತ್ತು ತೋರಿಸಿದ ಆದರ್ಶ ನಮಗೆ ಇಂದಿಗೂ ದಾರಿ ದೀಪವಾಗಿದೆ. ನಿಮ್ಮ ನೆನಪು ನಮಗೆ ಸದಾ ಸ್ಫೂರ್ತಿದಾಯಕ. ಸದಾ ನಿಮ್ಮ ಆಶೀರ್ವಾದದ ನೆರಳಿನಲ್ಲಿರುವ...

ಧರ್ಮಪತ್ನಿ : ಶ್ರೀಮತಿ ನಾಗರತ್ನಮ್ಮ
ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು







## ಜಗಳೂರು ಆಂಬ್ಯುಲೆನ್ಸ್ ಚಾಲಕ ಅಜ್ಮತ್ ನಿಧನಕ್ಕೆ ರಾಮುಲು ಸಂತಾಪ



ಬೆಂಗಳೂರು, ಸೆ 16 – ಜಗಳೂರಿನಲ್ಲಿ ಸರ್ಕಾರಿ ಆಂಬ್ಯುಲೆನ್ಸ್ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅಜ್ಮತ್ ಅವರು ಕೊರೊನಾದಿಂದ ಮೃತಪಟ್ಟಿರುವುದಕ್ಕೆ ಆರೋಗ್ಯ ಸಚಿವ ಶ್ರೀರಾಮುಲು ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಅಜ್ಮತ್ ಅವರು ಕೋವಿಡ್ ವಿರುದ್ಧದ ಸಮರದಲ್ಲಿ ಮುಂಚೂಣಿ ಹೋರಾಟಗಾರರಾಗಿ ಸತತವಾಗಿ ಕಾರ್ಯ ನಿರ್ವಹಿಸಿದ್ದರು ಎಂದು ಶ್ರೀರಾಮುಲು ಹೇಳಿದ್ದಾರೆ.

ಇಂತಹ ನಿಸ್ವಾರ್ಥ ಸೇನಾನಿಗಳು ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸುತ್ತಿರುವುದರಿಂದಲೇ ಸಾವಿರಾರು ರೋಗಿಗಳ ಜೀವಗಳು ಉಳಿಯುತ್ತಿವೆ ಎಂದೂ ಅವರು ಹೇಳಿದ್ದಾರೆ.

## ಸಚಿವ ಗಡ್ಕರಿಗೆ ಕೊರೊನಾ ದೃಢ

ಮುಂಬೈ, ಸೆ. 16 – ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ನಿನ್ನೆ ಬಳಲಿಕೆ ಉಂಟಾಗಿತ್ತು. ಆಗ ವೈದ್ಯರ ಸಲಹೆ ಪಡೆದಿದ್ದೆ. ತಪಾಸಣೆಯ ವೇಳೆ ಕೊರೊನಾ ಪಾಸಿಟಿವ್ ಕಂಡು ಬಂದಿದೆ ಎಂದು ಗಡ್ಕರಿ ಟ್ವೀಟ್ ಮಾಡಿದ್ದಾರೆ.






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte